ತಿರುಗಿಸುತ್ತಲೇ ತಲೆಸಿಕ್ಕನ್ನು ನಿಧಾನವಾಗಿ ಬಿಡಿಸಿ ಬಿಡುವಳು. ಕೂದಲ ನಡುವೆ ಅವಳ ಬೆರಳುಗಳು ಆಡುವ ರೀತಿಗೆ ಸಿಕ್ಕು ತಾನೇ ತಾನಾಗಿ ಬಿಟ್ಟುಹೋಗುವುದು.

'ಅಮ್ಮ, ನಿಮ್ಮ ಪ್ರಿಯ ಚೂಡಾಮಣಿಯನ್ನು ಧರಿಸಿ ಅದೆಷ್ಟು ಕಾಲವಾಯಿತು ಅಲ್ಲವೇ? ಇಗೋ ನೋಡಿ, ಈ ದಿನ ಹೆರಳು ಹಾಕಿ ಈ ಚೂಡಾಮಣಿಯನ್ನು ಇರಿಸುತ್ತೇನೆ. ನಿಮ್ಮ ಸಂಪೂರ್ಣ ಹೆರಳನ್ನು ಇದೊಂದೇ ಚೂಡಾಮಣಿ ಹಿಡಿದಿಟ್ಟುಕೊಳ್ಳುತ್ತದೆ. ನಿಮ್ಮ ಕೂದಲಂತೂ ನಿಮ್ಮಿಬ್ಬರ ನಡುವೆ ಕರಡಿಯಂತೆ. ಇನ್ನು ನಿಮ್ಮ ಮೇಖಲೆ?'

'ಹೌದು, ಅದನ್ನು ನೀನು ತಾನೇ ಮಾಡಿಸಿಕೊಂಡು ಬಂದಿರುವುದು, ಏನು ತಲೆ ಉಪಯೋಗಿಸಿದ್ದೀ ಅದನ್ನು ವಿಶೇಷವಾಗಿ ತಯಾರು ಮಾಡಿಸಲು. ನನ್ನ ಹಾರಗಳು, ನನ್ನ ವಲ್ಕಲ, ಎಲ್ಲವನ್ನೂ ಒಟ್ಟಾಗಿ ಮೇಖಲೆಗೆ ಹೊಂದಿಸಿದ್ದೀಯಾ. ಬಲು ಜಾಣೆ ನೀನು...'

'ಬರಿ ಜಾಣೆಯಾಗಿದ್ದರೆ ಬೇರೆ ರೀತಿ ಯೋಚನೆ ಮಾಡುತ್ತಿದ್ದೆ. ನಾನು ರಸಿಕಳು ಕೂಡ. ನನಗೆ ಗೊತ್ತು, ಅರ್ಜುನ ಮಹಾರಾಜರು ಎಷ್ಟು ರಸಿಕರು ಎಂದು. ಅದನ್ನೇ ತಾನೇ ಅವರು ಸೆಳೆಯಲು ಪ್ರಯತ್ನಿಸಿ ಸೋಲುವಂತೆ ನಟಿಸುವುದು, ನೀವು ಪಲ್ಲಂಗದಿಂದ ನೆಲಕ್ಕೆ, ನೆಲದಿಂದ ಪಲ್ಲಂಗಕ್ಕೆ, ಒಮ್ಮೆ ಕಂಬದ ಹಿಂದೆ, ಮತ್ತೊಮ್ಮೆ ಕಪಾಟಿನ ಹಿಂದೆ ಓಡಿ ಮಹಾರಾಜರನ್ನು ಸತಾಯಿಸುತ್ತಿದ್ದುದು...'

'ಏಯ್, ಇದೆಲ್ಲ ನಿನಗೆ ಹೇಗೆ ಗೊತ್ತು?'

'ಅಮ್ಮ, ಅದೊಂದು ದಿನ ಅರ್ಜುನ ಮಹಾರಾಜರು ನಿಮ್ಮ ಅಂತಃಪುರಕ್ಕೆ ಬರುವವರಿದ್ದರು. ನೀವು ಸಿಂಗರಿಸುವಂತೆ ಅವಸರಿಸಿದಿರಿ. ನಾನು ಅವರ ಇಷ್ಟದ ಸುಗಂಧ ದ್ರವ್ಯವನ್ನು ತರುವುದರೊಳಗೆ ಬಂದು ಬಿಟ್ಟಿದ್ದರು. ನಿಮ್ಮ ಶೃಂಗಾರ ರಸ ತಾರಕಕ್ಕೇರಿರುವುದು ತಿಳಿಯದೆ ನಾನು ಒಳಗಡಿ ಇಟ್ಟುಬಿಟ್ಟೆ. ನೀವು ಸತಾಯಿಸುತ್ತಿದ್ದಿರಿ. ಆಗ ನಿಮ್ಮ ಮೇಖಲೆಯ ಕೊಂಡಿಯನ್ನು ಎಳೆದುಬಿಟ್ಟರು. ಅದರ ಜೊತೆ ಹೊಂದಿಕೊಂಡಿದ್ದ ನಿಮ್ಮ ಸರಗಳು, ಒಡ್ಯಾಣ, ಹಾರಗಳು, ನಿಮ್ಮ ವಲ್ಕಲವೂ ಬಿದ್ದುಹೋಯಿತು. ಹಾಗೆ ಹೊಂದಿಸಿ ಕೊಟ್ಟವಳು ನಾನೇ ಅಲ್ಲವೇ? ಆ ಚಿನಿವಾರನಿಗೆ ತಿಳಿಸಿ ಹೇಳುವಷ್ಟರಲ್ಲಿ ನನಗೆ ಸಾಕು ಬೇಕಾಯಿತು. ಕೊನೆಗೆ ನಾನು ಧರಿಸಿಕೊಂಡು ಅವನಿಗೆ ತೋರಿಸಿ ತಯಾರು ಮಾಡುವಂತೆ ಹೇಳಿದೆ. ಪಾಪ ಮಹಾರಾಜರು, ನಿಮ್ಮ ಒಂದೊಂದೇ ಆಭರಣ ತೆಗೆಯುವ ಹೊತ್ತಿಗೆ ಅವರಿಗೆ ಏರಿದ್ದ ಮತ್ತೆಲ್ಲಾ ಜರ್‍ರೆಂದು ಇಳಿದುಹೋಗುತ್ತಿತ್ತು, ಅದಕ್ಕೆ...'

'ನೀನು ನನ್ನ ಒಡವೆಗಳನ್ನೆಲ್ಲಾ ಧರಿಸಿದ್ದೀಯಾ ಎನ್ನುವಂತಾಯಿತು?'

'ಇಲ್ಲದಿದ್ದರೆ ಆ ಚಿನಿವಾರ ಇಷ್ಟು ಚೆನ್ನಾಗಿ ಮಾಡಿ ಕೊಡುತ್ತಿದ್ದನೆ? ಈಗ ನೋಡಿ, ಅರ್ಜುನ ಮಹಾರಾಜರಿಗೆ ಎಷ್ಟು ಸುಲಭದ ಕೆಲಸ.'

'ಅದೇನೋ ಸರಿ. ಚಂಡಾಲಿ... ನೀನು ನಮ್ಮ ಸಮಾಗಮವನ್ನು ಕದ್ದು ಬೇರೆ ನೋಡಿದ್ದೀಯ ಅಲ್ಲವೇ?'

'ಇಲ್ಲಪ್ಪಾ... ನಾನು ನಾಚಿಕೆಯಿಂದ ಸುಗಂಧ ದ್ರವ್ಯವನ್ನು ಅಲ್ಲೇ ಇಟ್ಟು ಇನ್ನೇನು ಕಾಲ್ತೆಗೆಯಬೇಕು, ಆಗ...'

'ಆಗ... ಆಗೇನು... ಏನು ನೋಡಿದೆ ನೀನು?'

'ಅಯ್ಯೋ ಅಮ್ಮ, ನಿಮ್ಮ ಸೊಂಟವನ್ನು ಬಳಸಿ ಹತ್ತಿರಕ್ಕೆಳೆದುಕೊಂಡು, ನಿಮಗರಿವಿಲ್ಲದೆ ಚೂಡಾಮಣಿಯನ್ನು ಕೂಡ ಎಳೆದದ್ದು, ಆ ನಿಮ್ಮ ನೀಳಕೇಶ ಕರಡಿಯಂತೆ ನಿಮ್ಮಿಬ್ಬರ ನಡುವೆ ಬಂದದ್ದು ಸರಿಯಾಗಿ ನೋಡಲಿಲ್ಲ...'

'ನಿನ್ನಾ... ಮಹಾರಾಜರಿಗೆ ಹೇಳಿ ನಿನ್ನ ತಲೆ ತೆಗೆಸುತ್ತೇನೆ...'

'ನಿಮ್ಮ ಕೇಶರಾಶಿ ಅಂತೂ ಸಾಲು ಸಾಲು ಕಪ್ಪು ಮುಗಿಲು. ನಿಮ್ಮ ಕೇಶವೆಲ್ಲಾ ದೇಹವನ್ನು ಆವರಿಸಿಕೊಂಡಾಗ ಕಾಣುವುದೇನು? ಅಮ್ಮ ಅದು ಹೇಗೆ ಸಾಧ್ಯ? ಅರ್ಜುನ ಮಹಾರಾಜರು ಎಷ್ಟು ಸುಲಭವಾಗಿ ನಿಮ್ಮನ್ನು ಹಿಡಿದರು. ಅವರ ಗಮನವೆಲ್ಲಾ ನಿಮ್ಮ ಮೇಲೆ. ಅವರಿಗೆ ಬೇರೇನೂ ಕಾಣಿಸದು. ಇವರ ಮುಂದೆ ಆ ಮನ್ಮಥನೂ ಸೊನ್ನೆಯೇ.'

ದ್ರೌಪದಿಯ ಹಣೆಯ ನೆರಿಗೆಗಳು ಮಾಯವಾಗಿ ಪ್ರಸನ್ನತೆ ಮೂಡಿತು. ಕಣ್ಣುಗಳು ಅರ್ಧ ನಿಮೀಲಿತವಾದವು.

'ಚಂದ್ರಿ... ಚಿಕ್ಕ ವಯಸ್ಸಿನಿಂದಲೂ ಅವರು ಹಾಗೇ ಅಲ್ಲವೇ? ಎಲ್ಲರಿಗೂ ಮರ, ಎಲೆ, ಹಣ್ಣು, ಚಿಗುರು, ಕೊಂಬೆ, ಪಕ್ಷಿ ಕಂಡರೆ ಇವರಿಗೆ ಮಾತ್ರ ಪಕ್ಷಿಯ ಕಣ್ಣು ಕಂಡಿತಲ್ಲವೇ? ಅದೇ ರೀತಿ ಅವರ ಏಕಾಗ್ರತೆ ಶೃಂಗಾರದಲ್ಲಿ. ನನ್ನನ್ನು ಬಿಟ್ಟು ಅವರಿಗೆ ಬೇರೇನೂ ಗೋಚರಿಸುತ್ತಲೇ ಇರಲಿಲ್ಲ.'

'ಅಂದರೆ ಈ ಐವರಲ್ಲಿ ನಿಮಗೆ ಹೆಚ್ಚಿನ ಸುಖ ಅರ್ಜುನ ಮಹಾರಾಜರಲ್ಲಿ ಅಲ್ಲವೇ... ಗುರಿ ಇಟ್ಟರೆ ಮುಗಿಯಿತು?'

ಕಿಲಕಿಲನೆ ನಕ್ಕ ಅವಳ ಬಾಯನ್ನು ಮುಚ್ಚಿದ ದ್ರೌಪದಿಯ ಅಂಗಾಂಗದಲ್ಲಿ ಸಣ್ಣ ಚಳುಕು.

'ಪಾಪಿಷ್ಠೆ. ಬಾಯಿ ಬಿಟ್ಟೀಯೇ ಜೋಕೆ. ಯಾರ ಕಿವಿಗಾದರೂ ಬಿದ್ದರೆ...'

ದ್ರೌಪದಿ ಮಧುರ ನೆನಪುಗಳಲ್ಲಿ ಮೀಯುತ್ತಿರಬೇಕಾದರೆ ಚಂದ್ರಿಕಾ ಅವಳ ಕೇಶವನ್ನು ಸ್ವಚ್ಛಗೊಳಿಸಿ, ಮೈ ಮನಸ್ಸಿಗೆ ಹಿತವಾಗುವಂತೆ ಮೀಯಿಸಿ ಹೊಸ ವಸ್ತ್ರಗಳನ್ನು ತೊಡಿಸಿದಳು. ಕೆಂಡದ ಮೇಲೆ ಹಿತಮಿತವಾಗಿ ಹಾಲ್ಮಡ್ಡಿ ಹಾಕಿ ಕೂದಲನ್ನು ಕಾಯಿಸಿದಳು. ಅದೇ ವೇಳೆಗೆ ಬೆಳ್ಳಿ ಬಟ್ಟಲಲ್ಲಿ ಲಾವಂಚ, ರಕ್ತಚಂದನ, ಮಧು ಕೇಸರಿ ದಳದ ಕೆನೆ ಹಾಲನ್ನು ತಂದು ಮತ್ತೋರ್ವ ದಾಸಿ ದ್ರೌಪದಿಗೆ ಕುಡಿಯಲು ಕೊಟ್ಟಳು.

'ಅಮ್ಮ, ಇಲ್ಲಿಗೆ ನೀವು ಅರ್ಜುನ ಮಹಾರಾಜರನ್ನು ಬರಮಾಡಿಕೊಳ್ಳಲು ತಯಾರಾದಿರಿ...' ಬಟ್ಟಲನ್ನು ಹಿಂಪಡೆದು ದಾಸಿ ತುಟಿಯಂಚಿನಲ್ಲೇ ನಗುತ್ತಿರುವುದನ್ನು ನೋಡಿ ದ್ರೌಪದಿ ಅವಳ ಭುಜ ಹಿಡಿದಲುಗಿಸಿ,

'ಏನು, ನಗುವಂತಹದ್ದು ಏನಾಯಿತು ಈಗ?'

'ಅದು... ಯಾವ ಮಹಾರಾಜರಾದರೊ ಬರಬಹುದು.. .ಈ ಚಂದ್ರಿಕಾಗೆ ಹೇಗೆ ಗೊತ್ತು, ಅರ್ಜುನ ಮಹಾರಾಜರೇ ಬರುವರೆಂದು? ಅದಕ್ಕೆ ನಗು ಬಂತು' ಎಂದಳು ದಾಸಿ.

ದ್ರೌಪದಿ ಮೌನವಾದಳು. ದಾಸಿಗೆ ಬಂದಂತಹ ಆಲೋಚನೆ ಬೇರೆಯವರಿಗೆ ಬಾರದಿರುವುದೇ? ಎಂಥ ಹೀನಾಯ ಬಾಳು ತನ್ನದು ಎನಿಸಿತು. ನೆಟ್ಟ ದೃಷ್ಟಿ ನೆಟ್ಟಲ್ಲೇ. ಅವಳ ಆಸೆ, ಆಕಾಂಕ್ಷೆ, ಬಯಕೆ ಎಲ್ಲವೂ ಡಬ್ಬಿಯಲ್ಲಿ ಮುಚ್ಚಿಟ್ಟ ವಸ್ತುವಿನಂತೆ. ಐದು ಜನ ಧೀರರು, ಶೂರರು, ಸಹೃದಯಿಗಳು. ಹೆಂಡತಿ ತೋಳ್ತೆಕ್ಕೆಯಲ್ಲಿರುವಾಗ ಆಕ್ರಮಣಕಾರರು. ನೀಲಿಗಟ್ಟಿದ ಅವಳ ಶರೀರದಲ್ಲಿ ತಮ್ಮ ಭಾಗದ್ದು ಎಷ್ಟೆಂದು ಲೆಕ್ಕ ಹಾಕಿ ಸಂಭ್ರಮಿಸುವರು. ತನ್ನ ಇಚ್ಛೆಯಂತೆ ಒಂದೂ ನಡೆಯಲಿಲ್ಲ. ರಾಣಿಯಾದರೂ ಸರಿಯಾಗಿ ಅನುಭವಿಸಲಿಲ್ಲ. ಬೇಕಾದವರಿಗೆ ಸರಿಯಾಗಿ ಉಪಚರಿಸಲೂ ಆಗಲಿಲ್ಲ. ರಾಜಕುಮಾರರ ಪತ್ನಿಯಾದರೂ ದಾಸಿಯರಿರಲಿಲ್ಲ, ದಾಸ್ಯ ತಪ್ಪಲಿಲ್ಲ.

'ಅಮ್ಮ, ಇವಳ ಮಾತಿಗೆ ನೀವು ಇಷ್ಟು ಬೇಸರಿಸುವುದೆ? ಏಯ್, ನಿನಗೆ ಎಷ್ಟು ಧೈರ್ಯ ಹೀಗೆ ಮಾತನಾಡಲು?'

'ಚಂದ್ರಿ ಅವಳು ಪಾಪದವಳು. ಬಿಡು ಅವಳನ್ನು. ಚುಚ್ಚುವುದು ಅವಳ ಉದ್ದೇಶಲ್ಲ. ಪ್ರತಿ ಬಾರಿಯೂ ಆ ಅಸಹನೀಯ ನೋವು ನಾನು ಮಾತ್ರ ಬಲ್ಲೆ. ನೀನು ಪ್ರತಿದಿನವೂ ನೋವಿನ ಎಣ್ಣೆಗಳ ಲೇಪನದಿಂದ ನನ್ನ ನೋವನ್ನು ನಿವಾರಿಸುತ್ತೀಯಾ. ಮತ್ತೆ ಯುದ್ಧಕ್ಕೆ ಸನ್ನದ್ಧಳಾಗುತ್ತೇನೆ. ನನ್ನೊಳಗೊಬ್ಬಳಿದ್ದಾಳೆ, ಅವಳು ಈ ಪ್ರಶ್ನೆ ಕೇಳುತ್ತಲೇ ಇರುತ್ತಾಳೆ. ಇದುವರೆಗೂ ಅವಳಿಗೆ ಉತ್ತರ ಕೊಟ್ಟಿಲ್ಲ. ಒಂದು ಲೆಕ್ಕದಲ್ಲಿ ಆ ಕೌರವರೇ ವಾಸಿ. ಹೆಂಡತಿಯನ್ನು ಹಂಚಿಕೊಳ್ಳಲಿಲ್ಲ. ಈ ಭೋಗ ಭಾಗ್ಯಕ್ಕೆ ನನಗೆ ಹೆಣ್ತನ ಬೇಕಿತ್ತೇ? ಗೆದ್ದವ ಒಬ್ಬ, ಭೋಗಿಸುವವರು ಐವರು, ತಾಯಿಯ ಮಾತಿನ ಪರಿಪಾಲಕರು. ಈ ಅವಿವೇಕದ ನಿರ್ಧಾರ ತೆಗೆದುಕೊಂಡಾಗ ತಾಯಿಯಾದಳು ತನ್ನ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬಹುದಿತ್ತಲ್ಲವೇ? ಅವಳು ಹೆಣ್ಣಲ್ಲವೇ? ಅಥವಾ ಧರ್ಮಕ್ಕೆ ಹೆಸರು ಪಡೆದವರು ಹೇಳಬಹುದಿತ್ತಲ್ಲವೇ? ಎಲ್ಲ ವಿಷಯದಲ್ಲೂ ತಾವು ಚಿಕ್ಕವರೆಂದು ಅನಿಸಿಕೊಳ್ಳುವ ಕುಮಾರರು ಹೇಳಬಹುದಿತ್ತಲ್ಲವೇ? ಬೇಡ, ಕಲ್ಲುಬಂಡೆಯಂತಿರುವ ವಾಯುಪುತ್ರರು ಸುಮ್ಮನಾದರೇಕೆ? ಇವರ್ಯಾರು ಬೇಡ, ನನ್ನನ್ನು ಮತ್ಸ್ಯಬೇಧದಲ್ಲಿ ಗೆದ್ದವರು ಹೇಳಬಹುದಿತ್ತಲ್ಲವೇ? ಇವಳು ನನ್ನ ಸ್ವತ್ತು, ನನ್ನ ಹೆಣ್ಣು ಎಂದು. ಇಲ್ಲ, ಯಾರೂ ಮಾತನಾಡಲಿಲ್ಲ. ನಾನು ಬಲಿಯಾದೆ. ನನ್ನ ಭಾವನೆಗಳೆಲ್ಲಾ ಸತ್ತಿವೆ ಚಂದ್ರಿಕೆ. ತೆಗಿ ಈ ಚೂಡಾಮಣಿಯನ್ನು. ಇದನ್ನು ಧರಿಸುವ ಮನಸ್ಸು ನನಗಿಲ್ಲ.'

'ಅಮ್ಮ, ನಿಮ್ಮಲ್ಲಿ ಆ ಶಕ್ತಿ ಇದೆ. ನೀವು ಸಮರ್ಥರು. ನೀವು ಪ್ರತಿಜ್ಞೆ ಮಾಡದಿದ್ದರೆ ನಿಮ್ಮ ಗಂಡಂದಿರಲ್ಲಿ ಆ ಛಲ ಬರುತ್ತಿತ್ತೇ? ತುಂಬಿದ ಸಭೆಯಲ್ಲಿ ನೀವು ದನಿ ಎತ್ತಿದಿರಿ. ಶೂರಾದಿಶೂರರೆಲ್ಲ ಸದ್ದಿಲ್ಲದೇ ಕುಳಿತಿದ್ದರು. ನಿಮ್ಮ ಮಾತಿಗೆ ಎದ್ದು ನಿಂತರು. ನಿಮ್ಮ ದನಿ ಸಾಮಾನ್ಯದ್ದೇ? ನಿಮ್ಮ ಅಣ್ಣ ಕೃಷ್ಣ ಪರಮಾತ್ಮನವರೆಗೂ ತಲುಪುವ